**O.S.No. 243/2025**
**PW1**

**ದಿನಾಂಕ 4-7-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಎಸ್ ಪಿ ವಾದಿ ಪರ ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು ವಾದಿಯ ಜಿ ಪಿ ಎ ಹೊಂದಿದವನಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಸಾಕ್ಷಿ ಈ ದಿನ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

1. ಜಿ ಪಿ ಎ ಯನ್ನು ನಿಪಿ-1 ಎಂದು
2. ವಾದಿಯ ಜನನ ಪ್ರಮಾಣಪತ್ರವನ್ನು ನಿಪಿ -2 ಎಂದು,
3. ಪ್ರತಿವಾದಿ ನೀಡಿದ ನೋಟೀಸಿನ ಪ್ರತಿಯನ್ನು ನಿಪಿ-3 ಎಂದು,
4. ಅಂಚೆ ರಶೀಧಿ ನಿಪಿ-4
5. 2 ಅಂಚೆ ಸ್ವೀಕೃತಿಯನ್ನು ನಿಪಿ-5 ಮತ್ತು 6 ಎಂದು,
6. ವಾದಿ, ವಾದಿಯ ತಂದೆಯ ಆಧಾರ್ ಕಾರ್ಡನ್ನು ಮತ್ತು ಕುಟುಂಬದ ಪಡಿತರ ಚೀಟಿಯನ್ನು ನಿಪಿ-7 ರಿಂದ 9 ಎಂದು ಗುರುತಿಸಲಾಯಿತು.

ನಿಪಿ-**7** ರಿಂದ **9** ರ ದಾಖಲೆಗಳ ಮೂಲ ದಾಖಲೆಯನ್ನು ಪರಿಶೀಲಿಸಿದ ನಂತರ ಸರಿ ಇದೆ ಎಂದು ಖಚಿತ ಪಡಿಸಿಕೊಂಡು ಅವುಗಳಿಗೆ ಸಂಬಂದಪಟ್ಟ ನೋಟರಿ ಪ್ರತಿಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡು ಮೂಲ ದಾಖಲೆಗಳನ್ನು ಸಾಕ್ಷಿಗೆ ಹಿಂತಿರುಗಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಸಹಾಯಕ ಸರ್ಕಾರಿ ವಕೀಲರಿಂದಃ**

ನನ್ನ ತಾಯಿ ಗೀತಾ ರವರಿಗೆ ಆರೋಗ್ಯ ಸರಿ ಇಲ್ಲ ಅವರು ಮನೆಯಲ್ಲಿದ್ದಾರೆ. ಆ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು 2 ನೇ ವರ್ಷದ ಬಿ ಸಿ ಎ ಓದುತ್ತಿದ್ದೇನೆ. ನನ್ನ ತಮ್ಮನ ಜನನ ಪ್ರಮಾಣಪತ್ರಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ನಮ್ಮ ತಂದೆ ತಾಯಿ ನೀಡಿರುತ್ತಾರೆ. ನಿಮ್ಮ ಪೋಷಕರು ಕೊಟ್ಟ ಮಾಹಿತಿಯ ಆಧಾರದ ಮೇಲೆ ಪ್ರತಿವಾದಿಗಳು ನಿಮ್ಮ ಸಹೋದರನ ಜನನ ದಾಖಲೆಗಳಲ್ಲಿ ನೋಂದಣಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜನನ ದಾಖಲೆಗಳಲ್ಲಿ ಪ್ರಸ್ತುತ ಇರುವಂತಹ ಸಂಗತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸಂಗತಿಗಳು ಇರುವುದಿಲ್ಲ ನೀವು ಸುಳ್ಳು ಸಾಧನೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ತಮ್ಮನ ಜನನ ಪ್ರಮಾಣಪತ್ರದಲ್ಲಿ ಆತನ ಹೆಸರು, ತಂದೆಯ ಹೆಸರು ತಪ್ಪಾಗಿ ನಮೂದಾಗಿದೆ ಎಂದು 2023 ರಲ್ಲಿ

ಗೊತ್ತಾಗಿರುತ್ತದೆ. ಮೊದಲೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)